## ದುರ್ಗದಲ್ಲಿ ಡೈನೋಸಾರಸ್!

ಚಿತ್ರದುರ್ಗದ ಮುರುಘಾವನದಲ್ಲಿರುವ ಭೂಮಂಡಲದ ಜೀವವಿಕಾಸ ಪರಿಚಯಿಸುವ ಕಾಂಕ್ರೀಟ್ ಶಿಲ್ಪಗಳು ಪ್ರವಾಸಿಗರ ಆಕರ್ಷಣೆಯ ಕೇಂದ್ರ. ಅಲ್ಲಿರುವ ಬೃಹದಾಕಾರದ ಡೈನೋಸಾರಸ್ ಶಿಲ್ಪ ಅತ್ಯಂತ ಸಹಜವಾಗಿ ಮೂಡಿಬಂದಿದೆ. ಚಿತ್ರದುರ್ಗದ ಚಿತ್ತಾಕರ್ಷಕ ಬಂಡೆಬೆಟ್ಟದ ಮಗ್ಗುಲಲ್ಲೇ ಪ್ರತಿಷ್ಠಾಪನೆಗೊಂಡಿರುವ ಈ ದೈತ್ಯಜೀವಿಯ ವಿಗ್ರಹವನ್ನು ನೋಡಿದಾಗ ಪುರಾತನ ಯುಗದ ಭಾರೀ ಸರೀಸೃಪವೊಂದು ಪಕ್ಕದ ಬಂಡೆಯಿಂದಲೇ ಇಳಿದು ಬಂದಿದೆಯೇನೋ ಎಂಬಂತೆ ಭಾಸವಾಗುತ್ತದೆ. ಇಲ್ಲಿರುವ ಇತರ ಜೀವಿಗಳ ಹಾಗೂ ಮಾನವನ ವಿಕಾಸದ ಹಾದಿಯನ್ನು ಪರಿಚಯಿಸುವ ಕಾಂಕ್ರೀಟ್ ಶಿಲ್ಪಗಳು, ಮನೋಜ್ಞವಾಗಿವೆ ಹಾಗೂ ಅಷ್ಟೇ ಮಾಹಿತಿಪೂರ್ಣವಾಗಿವೆ.

**-ಎಚ್.ಎಸ್.ನವೀನಕುಮಾರ್, ಹೊಸದುರ್ಗ**





## ಪುರಾತನ ಹರಿವಾಣ

ದೇವರ ಪೂಜೆಗೆ ಬಳಸುವ ಈ ತಾಮ್ರದ ಹರಿವಾಣ ಸುಮಾರು 150 ವರ್ಷಗಳಷ್ಟು ಹಳೆಯದು. ಮೇಲ್ಭಾಗದಲ್ಲಿ ಸುಂದರ ಚಿತ್ತಾರದ ಕೆತ್ತನೆ ಇದ್ದು, ನೋಡಲು ಮನೋಹರವಾಗಿದೆ. ಕೆಳಗಡೆ ನಾಲ್ಕು ಚಕ್ರಗಳಿದ್ದು ಸರಾಗವಾಗಿ ಎಲ್ಲಿ ಬೇಕಾದರೂ ಎಳೆದು ಇಡಬಹುದು. ನಮ್ಮ ಮುತ್ತಾತನಿಂದ ನನಗೆ, ತಂದೆಯ ಮೂಲಕ ಬಳುವಳಿಯಾಗಿ ಬಂದಿರುವ ಇದು ನಮ್ಮ ಹಿರಿಯರ ಕಲಾ ಕೌಶಲಕ್ಕೆ ಉತ್ತಮ ನಿದರ್ಶನ.

**- ಭಾರತಿ ಬಿ.ಎಸ್., ಬೆಂಗಳೂರು**

## ಮರದ ಬುಡದಲ್ಲೂ ಬೆಳೆ

ಸಾಮಾನ್ಯವಾಗಿ ಮನೆಯ ಹಿತ್ತಲಿನಲ್ಲಿ, ಶಾಲಾ ಆವರಣದಲ್ಲಿ, ಉದ್ಯಾನವನಗಳಲ್ಲಿ ಇರುವ ಬೃಹತ್ ಮರಗಳ ಬುಡ ಖಾಲಿ ಇರುತ್ತದೆ. ದೊಡ್ಡ ದೊಡ್ಡ ಸಸ್ಯಗಳು ಅಲ್ಲಿ ಬೆಳೆಯುವುದಿಲ್ಲವಾದ್ದರಿಂದ ಗಿಡ ನೆಡುವ ಗೋಜಿಗೆ ಯಾರೂ ಹೋಗುವುದಿಲ್ಲ. ಮರದ ಬುಡದಲ್ಲಿ ನೆಲದಲ್ಲಿ ಹರಡಿ ಬೆಳೆಯುವ ಔಷಧೀಯ ಸಸ್ಯಗಳಾದ ಬ್ರಾಹ್ಮಿ, ಕಿರಾತ ಕಡ್ಡಿ, ಅಮೃತ ಬಳ್ಳಿ ಮುಂತಾದವುಗಳು ಚೆನ್ನಾಗಿ ಬೆಳೆಯುತ್ತವೆ. ವಾರಕ್ಕೊಮ್ಮೆ ನೀರು ಹನಿಸಿದರೂ ಸಾಕು. ಈ ರೀತಿ ನೆಡುವುದರಿಂದ ಜಾಗದ ಸದುಪಯೋಗ ಆಗುತ್ತದೆ. ಇನ್ನಷ್ಟು ಹಸಿರು ಬೆಳೆಯುತ್ತದೆ.

**-ಸಹನಾ ಕಾಂತಬೈಲು, ಮಡಿಕೇರಿ**

